ಈ) ಇಲ್ಲಿಯವರೆಗೆ (31-3-1998ರ ವರೆಗೆ) 20,258 ಮನೆಗಳ ಮಾಲೀಕರು ಮೇಲ್ಚಾಟು ವೆಚ್ಚ ಪಾವತಿ ಮಾಡಿ ಖಾತೆಗಳನ್ನು ಪಡೆದಿರುತ್ತಾರೆ.

ಉ) ಹೌದು.

ಊ) ಶ್ರೀ ಈಶ್ವರ್ ಭಟ್ ನಿವೃತ್ತ ಜಿಲ್ಲಾ ನ್ಯಾಯಾಧೀಶರ ದೂರುಗಳ ಬಗ್ಗೆ ವಿಚಾರಣೆ ನಡೆಸಿ ವರದಿ ನೀಡಲು ಬೆಂಗಳೂರು ಮಹಾನಗರ ಪಾಲಿಕೆ ನೇಮಕ ಮಾಡಿದೆ. ಆ ವರದಿಯನ್ನು ಆಧರಿಸಿ, ತಪ್ಪಿತಸ್ಥ ನೌಕರರ ವಿರುದ್ಧ ಇಲಾಖಾ ವಿಚಾರಣೆ ಮಾಡಲಾಗುವುದು.

ಋ) ಅಭಿವೃದ್ಧಿ ಶುಲ್ಕ ಪಾವತಿ ಪದ್ಧತಿಯನ್ನು ಸರಳೀಕರಿಸಿ ಅರ್ಜಿದಾರರೇ ನಿವೇಶನಗಳ ಅಳತೆಯ ಪ್ರಕಾರ ಚದುರಗಜ ಒಂದಕ್ಕೆ ರೂ. 100.00ರಂತೆ ಲೆಕ್ಕ ಹಾಕಿ ಬೆಂಗಳೂರು ವಿಜಯಬ್ಯಾಂಕಿನ ಯಾವುದೇ ಶಾಖೆಯಲ್ಲಿ ಪಾವತಿ ಮಾಡಿ ಚಲನ್ನಿನೊಡನೆ ಖಾತೆಗಾಗಿ ಅರ್ಜಿಯನ್ನು ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿದೆ.

ವಿಷಯ: ಸಜೀವ ಮುನ್ನೂರು ಏತ ನೀರಾವರಿ ಯೋಜನೆ.

903 (1229)

ಶ್ರೀ ಎ.ರುಕ್ಮಯ ಪೂಜಾರಿ (ಪಿಟ್ಲ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಜೀವ ಮುನ್ನೂರು ಏತ ನೀರಾವರಿ ಯೋಜನೆ ಯಾವಾಗ ಪ್ರಾರಂಭವಾಗಿದೆ?

ಆ) ಸದರಿ ಯೋಜನೆಯಿಂದ ಎಷ್ಟು ಎಕ್ರೆ ಜಮೀನಿಗೆ ನೀರು ಒದಗಿಸಬೇಕಾಗಿತ್ತು, ಈಗ ಎಷ್ಟು ಎಕ್ರೆ ಜಮೀನಿಗೆ ನೀರು ಒದಗಿಸಲಾಗುತ್ತಿದೆ; ಇದಕ್ಕೆ ಕಾರಣಗಳೇನು?

ಇ) ಹೆಚ್ಚು ಜಮೀನಿಗೆ ನೀರು ಒದಗಿಸಲು ರೈತರಿಂದ ಬೇಡಿಕೆಗಳು ಬಂದಿದೆಯೇ?

ಈ) ಬಂದಿದ್ದಲ್ಲಿ ಸರಕಾರ ಏನು ಕ್ರಮ ತೆಗೆದುಕೊಳ್ಳುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) ಸಜೀವ ಮೂನ್ನೂರು ಏತ ನೀರಾವರಿ ಯೋಜನೆಯನ್ನು 1969-70ನೇ ಸಾಲಿನಲ್ಲಿ ಪ್ರಾರಂಭವಾಗಿದೆ.

ಆ) ಸದರಿ ಯೋಜನೆಯಿಂದ 205 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದ್ದು, ಈಗ ಸದರಿ ಯೋಜನೆಯು ದುರಸ್ತಿಯಲ್ಲಿರುವುದರಿಂದ,

ಸುಮಾರು 30 ಎಕರೆ ಜಮೀನಿಗೆ ಮಾತ್ರ ನೀರು ಒದಗಿಸಲಾಗುತ್ತಿದೆ.

ಇ) ಬಂದಿದೆ.

ಈ) ಈ ಏತ ನೀರಾವರಿ ಯೋಜನೆಯನ್ನು ಈ ಹಿಂದೆ ಪಾಣೆ ಮಂಗಳೂರು ರೈತರ ಸೇವಾ ಸಹಕಾರಿ ಸಂಘದಿಂದ ನಿರ್ವಹಿಸಲ್ಪಡುತ್ತಿದ್ದು, ಸದರಿ ಸಂಘವು ಆರ್ಥಿಕ ಮುಗ್ಗಟ್ಟಿನಿಂದ ಈ ಯೋಜನೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗದಿದ್ದುದರಿಂದ ಈ ಏತ ನೀರಾವರಿ ಯೋಜನೆಯನ್ನು 4: 98ರಲ್ಲಿ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಗೊಂಡಿದ್ದು, ಈ ಯೋಜನೆಯ ದುರಸ್ತಿಗಾಗಿ 1998-99ನೇ ಸಾಲಿನ ಆಯವ್ಯಯದಲ್ಲಿ 10.00 ಲಕ್ಷ ರೂ.ಗಳ ಅಂದಾಜು ಮೊತ್ತ ಹಾಗೂ 3.00 ಲಕ್ಷ ರೂ.ಗಳ ಅನುದಾನದೊಂದಿಗೆ ಸೇರಿಸಲಾಗಿದ್ದು ದುರಸ್ತಿ ಕಾರ್ಯವನ್ನು ಶೀಘ್ರವಾಗಿ ಕೈಗೊಳ್ಳಲಾಗುವುದು.

ವಿಷಯ: ಬೆಂಗಳೂರು ರಿಚ್ಮಂಡ್ ವೃತ್ತಕ್ಕೆ ಮೇಲು ಸೇತುವೆ ಮಂಜೂರು ಮಾಡುವುದು.

907 (559)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ರಿಚ್ಮಂಡ್ ವೃತ್ತಕ್ಕೆ ಮೇಲು ಸೇತುವೆ ಮಂಜೂರಾಗಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಅನಂತ್‌ನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು):

ಅ) ಹೌದು.

ಆ) 98ರ ಮಾರ್ಚ್ 25ರಂದು ಶಂಕುಸ್ಥಾಪನೆ ಮಾಡಲಾಗಿದೆ.
ಅವಧಿ: 28 ತಿಂಗಳುಗಳು
ಮೊತ್ತ: ರೂ. 18 ಕೋಟಿಗಳು.

ವಿಷಯ: ವಿದ್ಯುತ್ ಮಂಡಳಿಗೆ ಬಾಕಿ ಬರಬೇಕಾದ ಹಣ.

910 (1255)

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು): ಮಾನ್ಯ ಇಂಧನ ರಾಜ್ಯ